## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** **2008-09ನೇ ಶೈಕ್ಷಣಿಕ ಸಾಲಿಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಶ್ರೀ ವಿಜಯ ಚಂದ್ರಶೇಖರ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ವಿಶ್ವಸ್ಥ ಮಂಡಳಿಯವರು ಕುಷ್ಟಗಿಯಲ್ಲಿ ಪ್ರಾರಂಭಿಸಲಿರುವ ಶ್ರೀ ವಿಜಯ ಚಂದ್ರಶೇಖರ ಶಿಕ್ಷಣ ಕಾಲೇಜಿಗೆ ವಿದ್ಯಾರ್ಥಿ ಪ್ರಮಾಣದ ನಿರ್ಧರಣೆ.**

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 162 ಯುಜಿವಿ 2007, ದಿನಾಂಕ:16-08-2007
2. NCTEಯ ಪ್ರಾದೇಶಿಕ ನಿರ್ದೇಶಕರ ಪತ್ರ ಸಂಖ್ಯೆ: F.SRO/NCTE/B.Ed/ 2008-09/3730, ದಿನಾಂಕ:11-08-2008.
3. ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಶ್ರೀ ವಿಜಯ ಚಂದ್ರಶೇಖರ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಅಧ್ಯಕ್ಷರ ದಿ:20-08-2008ರ ಪತ್ರ.

*****

**ಪ್ರಸ್ತಾವನೆ:**

1) ಸರ್ಕಾರಿ/ವಿಶ್ವವಿದ್ಯಾಲಯ/ಅನುದಾನಿತ/ಖಾಸಗಿ ಶಿಕ್ಷಣ ಕಾಲೇಜುಗಳಲ್ಲಿ ನಡೆಸಲಾಗುತ್ತಿರುವ ಬಿ.ಇಡಿ/ಬಿ.ಪಿ.ಎಡ್./ಎಂ.ಇಡಿ ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಪ್ರತಿ ಶೈಕ್ಷಣಿಕ ವರ್ಷಕ್ಕೆ ಅನ್ವಯ ವಾಗುವಂತೆ ಎನ್.ಸಿ.ಟಿ.ಇ. ಅಧಿನಿಯಮ 1993ರ 14ನೇ ಪ್ರಕರಣದಡಿ ಎನ್‌ಸಿಟಿಇ ಮಂಜೂರು ಮಾಡುವ ವಿದ್ಯಾರ್ಥಿ ಪ್ರಮಾಣವನ್ನು ಕೆ.ಎಸ್.ಯು. ಅಧಿನಿಯಮದ 59(18)ನೇ ಪ್ರಕರಣದಡಿ ಓದಲಾದ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಬಿ.ಇಡಿ. ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿಗಳು, 1999ರ 2(1)ನೇ ನಿಯಮದಡಿ ಸರ್ಕಾರವು ನಿಗಧಿಪಡಿಸುತ್ತಿದೆ.

2) ಓದಲಾದ(1)ರ ಸರ್ಕಾರಿ ಆದೇಶದಲ್ಲಿ **ಶ್ರೀ ವಿಜಯ ಚಂದ್ರಶೇಖರ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ವಿಶ್ವಸ್ಥ ಮಂಡಳಿ, ಕುರುಬನಾಳ ರಸ್ತೆ, ಕುಷ್ಟಗಿ-584 121, ಕೊಪ್ಪಳ ಜಿಲ್ಲೆ,** ಇವರು **ಪ್ರಾರಂಭಿಸಲಿರುವ ಶ್ರೀ ವಿಜಯ ಚಂದ್ರಶೇಖರ ಬಿ.ಇಡಿ. ಕಾಲೇಜು, ಕುರುಬನಾಳ ರಸ್ತೆ, ಕುಷ್ಟಗಿ-584 121, ಕೊಪ್ಪಳ ಜಿಲ್ಲೆ, ಈ ಕಾಲೇಜಿನಲ್ಲಿ ಬಿ.ಎಡ್. ಕೋರ್ಸನ್ನು 100 (ನೂರು)** ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿತ್ತು. ಓದಲಾದ(2)ರ ದಿನಾಂಕ:11-08-2008ರ ಪತ್ರದಲ್ಲಿ ಎನ್‌ಸಿಟಿಇಯು ಸದರಿ ಸಂಸ್ಥೆಯ ಬಿ.ಎಡ್. ಕೋರ್ಸಿಗೆ **100 (ನೂರು)** ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾನ್ಯತೆಯನ್ನು ನೀಡಿದ್ದು, ಓದಲಾದ(3)ರ ಸದರಿ ಸಂಸ್ಥೆಯ ಅಧ್ಯಕ್ಷರ ದಿ:20-10-2008ರ ಪತ್ರದಲ್ಲಿ ತಮ್ಮ ಸಂಸ್ಥೆಗೆ ಬಿ.ಇಡಿ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ: ಇಡಿ 176 ಯುಜಿವಿ 2008, ಬೆಂಗಳೂರು, ದಿನಾಂಕ: 24-10-2008.

3) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 18ನೇ ಉಪ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ಬಿ.ಎಡ್. ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು 1999ರ 2(1)ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ,

...ಮುಂದುವರೆದಿದೆ...

ಶ್ರೀ ವಿಜಯ ಚಂದ್ರಶೇಖರ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ವಿಶ್ವಸ್ಥ ಮಂಡಳಿ, ಕುರುಬನಾಳ ರಸ್ತೆ, ಕುಷ್ಟಗಿ-584 121, ಕೊಪ್ಪಳ ಜಿಲ್ಲೆ, ಇವರು ಪ್ರಾರಂಭಿಸಲಿರುವ ಶ್ರೀ ವಿಜಯ ಚಂದ್ರಶೇಖರ ಬಿ.ಇಡಿ. ಕಾಲೇಜು, ಕುರುಬನಾಳ ರಸ್ತೆ, ಕುಷ್ಟಗಿ-584 121, ಕೊಪ್ಪಳ ಜಿಲ್ಲೆ, ಈ ಕಾಲೇಜಿನ ಬಿ.ಎಡ್ ಕೋರ್ಸಿಗೆ 2008-09ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 100 (ನೂರು ಮಾತ್ರ) ವಿದ್ಯಾರ್ಥಿ ಪ್ರಮಾಣವನ್ನು ನಿಗದಿಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/10

(ಯು.ಬಿ. ಉಳವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

ಪ್ರತಿ ಇವರಿಗೆ:

(1) ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು-560 001.

(2) ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು - 560 001.

(3)ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಹೊಸಕೆರೆಹಳ್ಳಿ ಅಂಚೆ ಕಛೇರಿ ಹತ್ತಿರ, 100 ಅಡಿ ರಿಂಗ್ ರೋಡ್, ಬನಶಂಕರಿ 3ನೇ ಹಂತ, ಬೆಂಗಳೂರು-560 085.

(4) ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗ-585 106.

(5) ಪ್ರಾದೇಶಿಕ ನಿರ್ದೇಶಕರು, ದಕ್ಷಿಣ ಪ್ರಾಂತೀಯ ಸಮಿತಿ, ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷ ಮೊದಲನೇ ಮಹಡಿ, ಸಿ.ಎಸ್.ಡಿ. ಬಿಲ್ಡಿಂಗ್, ಹೆಚ್.ಎಂ.ಟಿ. ಅಂಚೆ, ಬೆಂಗಳೂರು-560 031.

(6) ವಿಶೇಷಾಧಿಕಾರಿ, ಕೇಂದ್ರೀಯ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಬೆಂಗಳೂರು-560009.

(7) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಗುಲಬರ್ಗ.

(8) ಅಧ್ಯಕ್ಷರು, ಶ್ರೀ ವಿಜಯ ಚಂದ್ರಶೇಖರ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ವಿಶ್ವಸ್ಥ ಮಂಡಳಿ, ಕುರುಬನಾಳ ರಸ್ತೆ, ಕುಷ್ಟಗಿ-584 121, ಕೊಪ್ಪಳ ಜಿಲ್ಲೆ.